ಓ ಎಸ್ ನಂಃ 754-14
ಪಿಡಬ್ಲ್ಯೂ ಃ 1
ದಿಃ27-02-2016ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಬಿ ಎಚ್ ವಕೀಲರಿಂದ.

ನನ್ನ ಅಜ್ಜಿ ಎಲ್ಲಮ್ಮ ಹೊಸಹಳ್ಳಿ ಗ್ರಾಮದ ಸರ್ವೆ ನಂಃ 69ರಲ್ಲಿ 1 ಎಕರೆ 20 ಗುಂಟೆ ಪ್ರದೇಶವನ್ನು ಖರೀದಿ ಮಾಡಿರುತ್ತಾರೆ, 7 ಗುಂಟೆ ಕರಾಬು ಸಹ ಇತ್ತು, ಕ್ರಯಪತ್ರದಲ್ಲಿ 7 ಗುಂಟೆ ಕರಾಬು ಜಮೀನಿನ ಬಗ್ಗೆ ಬರೆದಿರುವುದಿಲ್ಲ, 1 ಎಕರೆ 20 ಗುಂಟೆ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ ಭದ್ರಯ್ಯಶೆಟ್ಟಿ ಜಮೀನು, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ರಸ್ತೆ ಉತ್ತರಕ್ಕೆ ಭದ್ರಯ್ಯಶೆಟ್ಟಿಯ ಬಾಕಿ ಜಮೀನು ಆಗಿರುತ್ತದೆ, ಮೇಲೆ ತಿಳಿಸಿದ 1 ಎಕರೆ 20 ಗುಂಟೆ ಜಮೀನು ಮತ್ತು ಇತರೆ ಜಮೀನುಗಳನ್ನು ಎಲ್ಲಮ್ಮನ 5ಜನ ಮಕ್ಕಳುಗಳು ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ಸರಿ, 1 ಎಕರೆ 20 ಗುಂಟೆ ಜಮೀನು ಭಾಗದಲ್ಲಿ ನನ್ನ ತಂದೆ ಭಾಗಕ್ಕೆ ಬಂದಿರುತ್ತದೆ, ಸದರಿ ವಿಭಾಗ ಪತ್ರ ನಿಪಿ 1 ಆಗಿರುತ್ತದೆ, ವಿಭಾಗ ಪತ್ರದಲ್ಲಿ ಸರ್ವೆ ನಂಃ 69ರ ವಿಸ್ತೀರ್ಣವನ್ನು 2 ಎಕರೆ ಎಂದು ಬರೆದಿರುತ್ತದೆ, ವಿಭಾಗ ಪತ್ರ ಆಗುವ ಸಮಯದಲ್ಲಿ ಅಳತೆ ಮಾಡಿಸಿರುತ್ತಾರೆ, ಆ ಅಳತೆಯ ಬಗ್ಗೆ ಸ್ಕೆಚ್ ಕಾಫಿ ಹಾಜರು ಪಡಿಸಿರುವುದಿಲ್ಲ, ವಿಭಾಗ ಪತ್ರದಲ್ಲಿ ಸರ್ವೆ ನಂಃ 69ರ ಜಮೀನಿನ ಚೆಕ್ಕು ಬಂದಿಯನ್ನು ತಿಳಿಸಿರುವುದಿಲ್ಲ, ವಿಭಾಗ ಪತ್ರದಲ್ಲಿ ಸರ್ವೆ ನಂಃ 69ಕ್ಕೆ ಚೆಕ್ಕು ಬಂದಿ ಬರೆದು ಪೂರ್ವಕ್ಕೆ ಭದ್ರಯ್ಯ ಶೆಟ್ಟಿ ಜಮೀನು ಉತ್ತರಕ್ಕೆ ಭದ್ರಯ್ಯಶೆಟ್ಟಿ ಜಮೀನು ಹಾಗೂ ಪಶ್ಚಿಮ್ಕ ಮತ್ತು ದಕ್ಷಿಣಕ್ಕೆ ರಸ್ತೆ ಎಂದು ಬರೆದಿರುತ್ತದೆ ಅಂದರೆ ಸರಿ, ಸರ್ವೆ ನಂಃ 69ರ ಜಮೀನು 3 ಪೋಡುಗಳಾಗಿ ಸರ್ವೆ ನಂಃ 69-1, 69-2 ಹಾಗೂ 69-3 ಎಂದು ಇರುತ್ತದೆ, ಎಲ್ಲಮ್ಮನವರು ಖರೀದಿಸಿದ ನಂತರ ಸರ್ವೆ ನಂಃ 69ರ ಜಮೀನು ಪೋಡುಗಳು ಆಗಿರುತ್ತವೆ, ವಿಭಾಗ ಆದ ನಂತರ ಸರ್ವೆ ನಂಃ 69ರ ಜಮೀನನ್ನು ನಾನು, ನನ್ನ ತಂದೆ ಹಾಗೂ ನನ್ನ ಇತರೆ ಸಹೋದರರು ನರಸಿಂಹಯ್ಯ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಅಂದರೆ ಸರಿ, ಸದರಿ ಕ್ರಯಪತ್ರ ನಿಪಿ 6 ಆಗಿರುತ್ತದೆ ಅಂದರೆ ಸರಿ,

ಸದರಿ ಕ್ರಯಪತ್ರದಲ್ಲಿ ತೋರಿಸಿರುವ ಚೆಕ್ಕು ಬಂದಿ ತಪ್ಪಾಗಿರುತ್ತದೆ, ಚೆಕ್ಕು ಬಂದಿಯ ಬಗ್ಗೆ ಯಾವುದೇ ತಿದ್ದುಪಡಿ ಪತ್ರ ಈ ದಿನಾಂಕದ ತನಕ ಆಗಿರುವುದಿಲ್ಲ, ಸದರಿ ನಿಪಿ 6 ಕ್ರಯಪತ್ರದಲ್ಲಿ ಬರೆದಿರುವ ಚೆಕ್ಕು ಬಂದಿ ಸರಿ ಇದ್ದರು ಸಹ ತಪ್ಪಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ನರಸಿಂಹಯ್ಯ ಎಂಬುವವರು ನಾವು ಮಾರಾಟ ಮಾಡಿದ್ದ ಸರ್ವೆ ನಂಃ 69ರ ಜಮೀನನ್ನು ಪಾಪಣ್ಣ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ, ಸದರಿ ಪಾಪಣ್ಣ ಸದರಿ ಆಸ್ತಿಯನ್ನು ಈ ಕೇಸಿನ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಅಂದರೆ ಸರಿ, ಪಾಪಣ್ಣನ ಹೆಸರಿಗೆ ಆಗಿದ್ದ ಕ್ರಯಪತ್ರ ನಿಪಿ 8 ಆಗಿರುತ್ತದೆ ಅಂದರೆ ಸರಿ, ಪ್ರತಿವಾದಿ ಹೆಸರಿಗೆ ಆಗಿರುವ ಕ್ರಯಪತ್ರ ನಿಪಿ 21 ಆಗಿರುತ್ತದೆ ಅಂದರೆ ಸರಿ, ವಿಭಾಗ ಪತ್ರ ಆಗುವಾಗ ಹಾಗೂ ನಾವು ಕ್ರಯಪತ್ರ ಬರೆದುಕೊಡುವಾಗ ಸರ್ವೆ ನಂಃ

69ರ ಜಮೀನು ಅಳತೆ ಆಗಿರಲಿಲ್ಲ ಅಂದರೆ ಸರಿ ಆರ್ ಟಿ ಸಿಯಲ್ಲಿ ಕಂಡ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಪತ್ರ ಬರೆದಿರುತ್ತೇವೆ, ಆರ್ ಟಿ ಸಿಯಲ್ಲಿ ವಿಸ್ತೀರ್ಣ ಕ್ರಯಪತ್ರದ ಪ್ರಕಾರ ವಿಭಾಗ ಪತ್ರದ ಪ್ರಕಾರ ನಮೂದಾಗಿಲ್ಲ ಅಂದರೆ ಸರಿಯಲ್ಲ, ದಾವಾ ತಾರೀಖಿನಂದು ನಾನು ದಾವಾ ಆಸ್ತಿಯ ಸ್ವಾಧೀನ ಹೊಂದಿದ್ದೆ ಎಂದು ತೋರಿಸಲು ಆರ್ ಟಿ ಸಿ ಮತ್ತು ಸ್ಕೆಚ್ ಹಾಜರು ಪಡಿಸಿರುತ್ತೇನೆ, ಈ ಕೇಸನ್ನು ದಾಖಲಿಸುವ ಸಮಯದಲ್ಲಿ ದಾವಾ ಆಸ್ತಿ ತಗ್ಗಿಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇತ್ತು, ಅದರ ಖಾತೆ ನಂಃ 118 ಆಗಿರುತ್ತದೆ, ಅದು ನಿಪಿ 23 ಮತ್ತು 24 ಆಗಿರುತ್ತದೆ, ನಿಪಿ 23 ಮತ್ತು 24ರಲ್ಲಿ ಆಗಿರುವ ಆದೇಶದ ಬಗ್ಗೆ ಪ್ರತಿವಾದಿ ಪ್ರಶ್ನಿಸಿ ಇ ಓರವರ ಮುಂದೆ ಆಫೀಲು ಸಲ್ಲಿಸಿದ್ದರು ಅಂದರೆ ಸರಿ, ಸದರಿ ಆಫೀಲು ಪುರಸ್ಕೃತಗೊಂಡಿರುತ್ತದೆ ಅಂದರೆ ಸರಿ, ಸದರಿ ಇ ಓರವರ ತೀರ್ಪನ್ನು ಪ್ರಶ್ನಿಸಿ ನಾನು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಲ್ಲಿಸಿದ್ದೇ ಅಂದರೆ ಸರಿ, ರಿಟ್ ಅರ್ಜಿಯಲ್ಲಿ ಸಿವಿಲ್ ಕೋರ್ಟ್‌ನಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ಆದೇಶ ಆಗಿರುತ್ತದೆ ಅಂದರೆ ಸರಿ, ಇ ಓ ಆದೇಶದ ಪ್ರಕಾರ ನನ್ನ ಹೆಸರಿಗೆ ಆಗಿದ್ದ ಖಾತೆಯನ್ನು ತಗ್ಗಿಗುಪ್ಪೆ ಗ್ರಾಮ ಪಂಚಾಯಿತಿಯವರು ವಜಾ ಮಾಡಿದ್ದಾರೆ ಅಂದರೆ ಸರಿ ಯತಾಸ್ಥಿತಿ ಕಾಪಾಡುವಂತೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಇರುತ್ತದೆ ಸದರಿ ಆದೇಶದ ಪ್ರತಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ, ನನ್ನಹೆಸರಿಗೆ ನನ್ನ ತಂದೆ ಮತ್ತು ನನ್ನ ಸಹೋದರರು ಬರೆದುಕೊಟ್ಟ ದಾನ ಪತ್ರದ ಪ್ರಕಾರ ಖಾತೆ ಆಗಿರುತ್ತದೆ ಅದಕ್ಕೂ ಮೊದಲು ಎಲ್ಲಮ್ಮ ಹೆಸರಿಗೆ ಆಗಿತ್ತು ಆ ನಂತರ ನನ್ನ ತಂದೆ ಹೆಸರಿಗೆ ಆಗಿತ್ತು, ಸದರಿ ದಾನ ಪತ್ರವನ್ನು ಈ ಕೇಸಿನಲ್ಲಿ ಹಾಜರು ಪಡಿಸಿರುವುದಿಲ್ಲ ಸದರಿ ದಾನ ಪತ್ರ ನೊಂದಣಿ ಆಗಿರುವುದಿಲ್ಲ, ಸದರಿ ದಾನ ಪತ್ರದ ಪ್ರಕಾರ ನನಗೆ ಯಾವುದೇ ಹಕ್ಕು ಬಂದಿರುವುದಿಲ್ಲ ಹಾಗೂ ಸ್ವಾಧೀನ ಸಹ ಬಂದಿರುವುದಿಲ್ಲ ಅಂದರೆ ಸರಿಯಲ್ಲ, ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದೇ ಇದ್ದರು ಸಹ ಸುಳ್ಳು ದಾವೆ ಮಾಡಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಸಿವಿಲ್ ಶ್ರೇಣಿ ನ್ಯಾಯಾಧೀಶರು,
ಮಾಗಡಿ.